## 1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ

**ಸಿಸಿ ನಂ:95/2025**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಚನ್ನಗಿರಿ  ಪೊಲೀಸ್ ಠಾಣೆ | | ಎ1. ಶಿವಕುಮಾರ ಬಿನ್ ಚಂದ್ರಪ್ಪ<br>ವಯಸ್ಸುಃ 381 ವರ್ಷ,<br>ವಾಸಃ ಮನೆ ನಂ 716/7, 1ನೇ ಮೇನ್ 1ನೇ ಕ್ರಾಸ್  ಹೂವಿನಹಡಗಲಿ, ವಿಜಯನಗರ ಜಿಲ್ಲೆ ಜಿಲ್ಲೆ. |

**<u>ಆಪಾದನೆ</u>**

ನಾನು **ಮಹಾಲಕ್ಷ್ಮಿ ಜಿ** 1ನೇ ಹೆಚ್ಚುವರಿ  ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಸಂಜೆ 6.00 ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ಸರಹದ್ದಿನ ಗಾದಕಟ್ಟೆ ಗ್ರಾಮದ ಹೋಟೆಲ್ ಮಂಜಣ್ಣ ರವರ ತೋಟದ ಪಕ್ಕದಲ್ಲಿ ಹಾದುಹೋಗಿರುವ ಚನ್ನಗಿರಿ-ಭದ್ರಾವತಿ ರಾಜ್ಯ ಹೆದ್ದಾರಿಯಲ್ಲಿ ಆರೋಪಿಯಾದ ನೀನು ಚಾಸಾ-10 ರವರ ಮಾಲೀಕತ್ವದ ಕೆಎ-17/ಎನ್-3947 ನೇ ಮಹೇಂದ್ರ ಜೈಲೋ ವಾಹನವನ್ನು   ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ದ್ಯಾಮೇಶ ಎಂಬುವವನಿಗೆ ಅಪಘಾತಪಡಿಸಿ ವಾಹನವನ್ನು ನಿಲ್ಲಿಸದೆ ಅಪಘಾತ ಸ್ಥಳದಿಂದ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿರುವುದರಿಂದ ನಿನ್ನ ವಿರುದ್ದ  ನೀವು ಕಲಂ 281 ಬಿ ಎನ್ ಎಸ್  ಮತ್ತು 177 ಮೋಟಾರು ವಾಹನ ಕಾಯ್ದೆ ರಡಿಯಲ್ಲಿ  ಅಪರಾಧವನ್ನು  ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಆಪಾದಿಸಿದೆ.

ಎರಡನೇಯದಾಗಿ  ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿಯಾದ ನೀನು  ತನ್ನ  ವಾಹನವನ್ನು  ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ದ್ಯಾವೇಶನಿಗೆ ಅಪಘಾಪಡಿಸಿದ್ದರಿಂದ ಸದರಿಯವರಿಗೆ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು ರಕ್ತಸ್ರಾವವಾಗಿ, ಕಿವಿಗಳಿಗೆ , ಕಾಲುಗಳಿಗೆ ಪೆಟ್ಟು ಬಿದ್ದು ಮೃತಪಟ್ಟಿರುವುದರಿಂದ ಕಲಂ  106(1) ಬಿ ಎನ್ ಎಸ್ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಆಪಾದಿಸಿದೆ.

ದಿನಾಂಕಃ 22-07-2025

**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಗಿರಿ.**

**1ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 95/2025</u>**

1. **ಕರ್ನಾಟಕ ಸರ್ಕಾರ (ಚನ್ನಗಿರಿ ಪಿ.ಎಸ್ )**

**ವಿರುದ್ಧ**

ಎ1. ಶಿವಕುಮಾರ ಬಿನ್ ಚಂದ್ರಪ್ಪ
ವಯಸ್ಸುಃ 381 ವರ್ಷ,

## <u>ಆರೋಪಿಯ ಹೇಳಿಕೆ</u>

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದೆನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತನಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ23-07-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

**ಸ್ಥಳಃ ಚನ್ನಗಿರಿ**
**ದಿನಾಂಕಃ 23-07-2025.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಗಿರಿ.**